doc-530
T-P-2

Reg No B G 155 22—8—72

55th Year of Publication ★ 'Satyavadi' daily, Mysore. 4

In State – The First
Golden Jubilee
Celebrated Paper
★
News, Views, Dharmic
Moral Ethical Matters

ರಾಷ್ಟ್ರದಲ್ಲಿ ಪ್ರಥಮ
ಸುವರ್ಣ ಜಯಂತಿ
ಸಂಭ್ರಮಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಹರಿಜನರಿಗೆ ನಿವೇಶನ ಹಂಚುವ ಬಗ್ಗೆ ಕೇಂದ್ರದ ನಿರ್ಧಾರ

Srimat Sri Upendramohan Birth Centenary Celebrations

Srimat Sree Upendramohanji, Founder of the Shastra Dharma Prachara Sabha, was born at Halisahar near Calcutta, hundred years ago He is also the Founder of 'Truth' English Weekly and 'Bharatjira' Bengali Weekly His birth centenary is being celebrated at His Leela Niketan, 91 Chowringhee, Calcutta 20, for a fortnight, from the 11th August to the 21st August 1972.

The centenary will also be celebrated in other important branches of the Sabha during this year at Allahabad (U.P) Halisahar, Berhampora, Tamluk, Coochbehar (W. B), Arrah (Behar), Hyderabad. Honganur (Mysore) and Delhi etc.

Public Meetings, discourses on the Founder's life and distribution of books will be some of the important features of the Celebration

Special discourses will be held on every Sunday nearest to the Sukla Ashtami of the year 1972–73.

ಚೀಣಾ ಜನಸಂಖ್ಯೆ

ಪೀಕಿಂಗ್— ಭೂಮಿಯ ಮೇಲೆ ಅತಿ ಹೆಚ್ಚು ಜನಸಂಖ್ಯೆಯ ದೇಶವಾದ ಚೀಣಾದ ಈಗಿನ ಜನಸಂಖ್ಯೆ 697900000 ಆಗಿದೆ.

ಮುಖ್ಯಮಂತ್ರಿಗಳ ಮೇಲೆ ಭ್ರಷ್ಟಾಚಾರ ಆರೋಪ

ನವದೆಹಲಿ— ಬಿಹಾರಿನ ಮಾಜಿ ಮುಖ್ಯ ಮಂತ್ರಿ ಶ್ರೀ ಸಾಹೆರವರ ಮೇಲೆ ಸಿ.ಬಿ.ಐ ರವರು ಪಾಟ್ನಾ ಮ್ಯಾಜಿಸ್ಟ್ರೇಟು ಕೋರ್ಟಿನಲ್ಲಿ ಫಿರ್ಯಾದು ದಾಖಲಿಸಿರುವರು; ಅವರು 4 ವರೆ ವರ್ಷ ಕಾಲ ಮುಖ್ಯಮಂತ್ರಿಗಳಾಗಿದ್ದಾಗ ನ್ಯಾಯಬಾಹಿರವಾಗಿ ರೂ 4 ಲಕ್ಷ ಆಸ್ತಿ ಹೆಚ್ಚಿಸಿಕೊಂಡಿರುವರೆಂಬುದೇ ಆರೋಪ: ಅವರ ಮನೆ ಶೋಧಿಸಿದಾಗ ರೂ 258000 ಹಣ ಸಿಕ್ಕಿತು.

ರಷ್ಯಾದಲ್ಲಿ ತುರ್ತು ಪರಿಸ್ಥಿತಿ

ಮಾಸ್ಕೋಗೆ 24 ಮೈಲಿ ದೂರದಲ್ಲಿ ಪೋಲ್ಗಾ ನದಿ ತೀರದಲ್ಲಿ ಅರ್ಧ ಮಿಲಿಯ ಜನಸಂಖ್ಯೆ ಇರುವ ಯೊರಸ್ಲಾವ್ ಪಟ್ಟಣದ ಸುತ್ತ ದಟ್ಟ ಅಡವಿಗಳಲ್ಲಿ ತೀವ್ರ ಬೆಂಕಿ ಜ್ವಾಲೆ ಪ್ರಸರಿಸಿರುವುದರಿಂದ ಅಲ್ಲಿ ತುರ್ತು ಪರಿಸ್ಥಿತಿ ಜಾರಿಮಾಡಲಾಗಿದೆ.

ಆಹಾರಧಾನ್ಯ ದಾಸ್ತಾನು

ನವದೆಹಲಿ— ಪೈಪುಲೈನಿನಲ್ಲಿಯ ದಾಸ್ತಾನು ಬಿಟ್ಟು, ಈ ವರ್ಷ ಪ್ರಾರಂಭದಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳಲ್ಲಿ 8.2 ಮಿಲಿಯ ಟ್ ಆಹಾರಧಾನ್ಯ ದಾಸ್ತಾನಿದ್ದಿತೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಹೆಚ್ಚಿಗೆ ಡಾಕ್ಟರುಗಳು

ನವದೆಹಲಿ— ರಾಜಸ್ಥಾನ ಮತ್ತು ಓರಿಸ್ಸಾಗಳಲ್ಲಿ ಮಾತ್ರ ಕ್ರಮವಾಗಿ 400 ಮತ್ತು 659 ಡಾಕ್ಟರುಗಳು ಹೆಚ್ಚಾಗಿರುವರೆಂದು ತಿಳಿಸಲಾಗಿದೆ ಎಂದು ಲೋಕಸಭೆಯಲ್ಲಿ ಹೇಳಲಾಯಿತು.

●

ಆದ್ಭುತ ಯೋಜನೆ

ನವದೆಹಲಿ— 10 ವರ್ಷಗಳಲ್ಲಿ 3 ಮಿಲಿಯ ಭೂಮಿಯಿಲ್ಲದ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬಿನ ಜನರಿಗೂ ಮತ್ತು 2ಮಿಲಿಯ ಭೂಮಿಯಿಲ್ಲದ ವ್ಯವಸಾಯ ಸಂಸಾರಗಳಿಗೂ ಮನೆ ನಿವೇಶನ ಒದಗಿಸಲು ರೂ. 375 ಕೋಟಿ ಬಂಡವಾಳದ ಕಾರ್ಯಕ್ರಮವನ್ನು ವ್ಯವಸಾಯ ರಾಷ್ಟ್ರೀಯ ಆಯೋಗ ಶಿಫಾರಸು ಮಾಡಿದೆ.

★

ನ್ಯಾಯಾಧೀಶರ ಮೇಲೆ ಆರೋಪ

ಕೊಚ್ಚಿ— ಕೇರಳದ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ತಮ್ಮ ವಯಸ್ಸಿನ ಬಗ್ಗೆ ಗೌರ್ನರರಲ್ಲಿ ಸುಳ್ಳಾಗಿ ಘೋಷಿಸಿರುವರೆಂದು ಜಿಲ್ಲಾ ಮ್ಯಾಜಿಸ್ಟ್ರೇಟರಲ್ಲಿ ಮಾಜಿ ಶಾಸಕ ಶ್ರೀ ಜಲೀಲರು ಮಾಡಿರುವ ಫಿರ್ಯಾದು ಸ್ವೀಕೃತವಾಗಿ ಸಮನ್ಸ್ ಹೊರಡಿಸಲಾಗಿದೆ.

★ ಹೈದರಾಬಾದು– ಆಂಧ್ರ ಪ್ರದೇಶ ಸರಕಾರ ರೂ 20.50 ಅಭಿವೃದ್ಧಿ ಸಾಲ ಎತ್ತುತ್ತದೆ

ಪ್ರವಾಹದಿಂದ ನಷ್ಟ

ನವದೆಹಲಿ— ದೇಶದಲ್ಲಿನ ಪ್ರಸ್ತುತ ಪ್ರವಾಹಗಳಿಂದ ರೂ 27 ಕೋಟಿ ನಷ್ಟ ಸಂಭವಿಸಿರುವುದೆಂದು ಬಂದಿರುವ ವರದಿಗಳಿಂದ ಗೊತ್ತಾಗಿದೆ.

★

ಸರಕಾರ ಸಾಲ ಎತ್ತುವುದು

ಬೆಂಗಳೂರು— ರಾಜ್ಯ ಸರಕಾರವು 1984ರ ಶ್ರೇಕಡ 5 ಮುಕ್ಕಾಲು ಬಡ್ಡಿಯ ರೂ 14.25 ಕೋಟಿಯ ಅಭಿವೃದ್ಧಿ ಸಾಲ ಎತ್ತುವದು ಪ್ರಕಟಿತವಾಗಿದೆ.

○

ಭಯಂಕರ ವಿಷಯ

ಬ್ರಿಸ್ಟ್— ಈ ದಶಕದ ಕಡೆಯಲ್ಲಿ ವಿಶ್ವದಲ್ಲಿ 600 ಮಿಲಿಯ ದೈಹಿಕ ಅಥವಾ ಮಾನಸಿಕ ವಿಕಲರರಿರುವರೆಂದು ಪುನರ್ವಸತಿ ನಿಪುಣರೊಬ್ಬರು ಹೇಳಿದರು.

★

ಕೇಂದ್ರದಿಂದ ತನಿಖೆ ಇಲ್ಲ

ಶರಾವತಿ— ಶರಾವತಿ ಸಂಬಂದದಲ್ಲಿ ಕೇಂದ್ರದಿಂದ ತನಿಖೆಯಿಲ್ಲವೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

○

ಪಾಕಿಸ್ತಾನ ಅಸೆಂಬ್ಲಿಯಲ್ಲಿ ಗಲಾಟೆ

ಇಸ್ಲಾಮಾಬಾದು— ಪಾಕಿಸ್ತಾನವು ಅಮೇರಿಕಾದಿಂದ 'ಹಿಂಸಾತ್ಮಕ ಆಯುಧಗಳನ್ನು ಕೊಂಡಿರುವದೆಂಬ ವರದಿ ಬಗ್ಗೆ ಪಾಕಿಸ್ತಾನ ನ್ಯಾಷನಲ್ ಅಸೆಂಬ್ಲಿಯಲ್ಲಿ ತೀವ್ರ ಗಲಾಟೆಯಾಗಲು, ಸಂಬಂಧಪಟ್ಟ ಮಂತ್ರಿಗಳು ಆ ವ್ಯಾಪಾರವನ್ನು ತ್ಯಜಿಸಲಾಗಿದೆಯೆಂದು ತಿಳಿಸಿದರು.

● ನವದೆಹಲಿ— ರಾಜ್ಯಗಳ 5 ನೇ ಯೋಜನೆಯ ಕರಡುಗಳು ಮುಂದಿನ ಜನವರಿ ಕಡೆಯೊಳಗೆ ಸಿದ್ಧವಾಗುವ ನಿರೀಕ್ಷೆಯಿದೆ – 5 ನೇ ಯೋಜನೆಯು 1974 ನೆ ಏಪ್ರಿಲ್ ನಿಂದ ಜಾರಿಗೆ ಬರಬೇಕಾಗಿದೆ.

ಹಾವುಗಳು

ವಿಶ್ವದ ಅಸಂಖ್ಯ ರಾಷ್ಟ್ರಗಳ ಜನಪದದಿಂದಾರಂಭಿಸಿ, ಸಾಹಿತ್ಯ, ಸಂಸ್ಕೃತಿ, ಶಿಲ್ಪ ಕಲೆಗಳಲ್ಲಿ ಹಾವು ಅಚ್ಚಳಿಯದ ಪ್ರಭಾವ ಬೀರಿದೆ; ವಿಶ್ವದಲ್ಲಿ ನ್ಯೂಜಿಲೆಂಡ್ ಐರ್ಲೆಂಡ್, ಆರ್ಕ್‌ಟಿಕ್‌ನಲ್ಲಿ ಮಾತ್ರ ಹಾವುಗಳಿಲ್ಲ. ಒಟ್ಟು ಎರಡು ಸಾವಿರದ ಐನೂರು ಹಾವು ಜಾತಿಗಳಲ್ಲಿ ಭಾರತದಲ್ಲಿ 216 ಜಾತಿಗಳಿದ್ದು, ಇವುಗಳಲ್ಲಿ 52 ವಿಷದ ಹಾವುಗಳು ವರುಷದಲ್ಲಿ ಎರಡು ಲಕ್ಷ ಮಂದಿ ಹಾವಿನಿಂದ ಕಡಿಯಲ್ಪಡುತ್ತಾರೆಂದೂ, ಅವುಗಳಲ್ಲಿ 15 ಸಾವಿರ ಮಂದಿ ಸಾಯುತ್ತಾರೆಂದೂ ಹೇಳಿದೆ.

ಅಜೆಂತಾದ 19 ನೇ ಗುಹೆಯಲ್ಲಿ ನಾಗರಾಣಿಯವರೊಂದಿಗೆ ಇರುವ ಸಪ್ತ ಶಿರಸ್ಸಿನ ನಾಗರಾಜ ಶಿಲ್ಪವಿದೆ

ಉತ್ತರ ಅಮೇರಿಕಾದ ಓಹಿಕಾ ಜನರು ತಮ್ಮ ಪೂರ್ವಜನೆಂದು ನಂಬಿರುವ ಹಾವನ್ನು ಕೊಲ್ಲುವುದಿಲ್ಲ. [ಕೈ. ಸಂ]

SHAKTI SUDHA

A Superb Tonic

ವುಡ್‌ಲ್ಯಾಂಡ್ 18-8-72 ರಿಂದ ಅಮೋಘ 16ನೇ ವಾರ

.... ಚಿತ್ರಾಕರ್ಷ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್, ಪಂಡರಿಬಾಯಿ

ನಿರ್ದೇಶನ: ರಾಶಿ ಸಹೋದರರು ನಿರ್ಮಾಪಕರು: ಎಂ ಜೆ ಎಂ ಸಹೋದರರು

ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30

ಮಂತ್ರಾಲಯ ಮಹಾತ್ಮೆ ಅಥವಾ ರಾಘವೇಂದ್ರ ವಿಜಯ

ಅಪೂರ್ವ 2 ನೇ ವಾರ

— ಅತ್ಯಮೋಘ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

ಲಾಲ್ ಪತ್ತರ್

ಪ್ರತಿ ದಿನ 3 ಪ್ರದರ್ಶನಗಳು

ಪಾತ್ರ — ರಾಜ್‌ಕುಮಾರ್, ಹೇಮಾಮಾಲಿನಿ, ರಾವಿ, ವಿನೋದ್ ಮೆಹ್ರಾ

Edited Printedand Published by Dharmapracharanirata M S Krishna Rao (Propretor) at the Satvavadi Press Chamsrajapuram Mysore

ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯಹ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈದೇಶ ಹೊತ್ತ ಚಿತ್ರ ಸಂದೇಶ್ ರವರ ಜೊಚ್ಚಲು ಚಿತ್ರ

★

ಆನೆ - ಹುಡುಗ

ಅಖಿಲ ಭಾರತದಲ್ಲಿ ಕೂಡಲೇ



ಗೋವಧೆ ನಿಷೇಧವಾಗಲಿ

Potect the Cow

Help The Goakshana

— Humanitarian Propoganda Monthly ....

Contribute Liberally to the National Defence Fund

Quality Printing Neat Binding

Lakshminarasimha Press

Sivarampet, Mysore